ದಿನಾಂಕ 07-12-2023 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು :** 1 ರಿಂದ 5 ಹಾಗೂ 7(a) to 7 (d) ಪ್ರತಿವಾದಿಗಳ ಪರ ಶ್ರೀ ಎಮ್ ಬಿ ಪಿ ವಕೀಲರಿಂದ .

6 ಮತ್ತು 7 ನೇ ಪ್ರತಿವಾದಿಗಳು ನನ್ನ ಚಿಕ್ಕಪ್ಪನಾದ ಕೇದಾರಪ್ಪನ ಮಕ್ಕಳು ಎಂದರೆ ಸರಿ. 8 ಮತ್ತು 9 ನೇ ಪ್ರತಿವಾದಿಗಳು ನನ್ನ ಚಿಕ್ಕಪ್ಪನಾದ ಹನುಮಂತನ ಮಕ್ಕಳು ಎಂದರೆ ಸರಿ. ಈಗ ನನಗೆ 45 ವಯಸ್ಸು. ನನ್ನ ತಂದೆ ಹಾಗೂ ಮೇಲೆ ಹೇಳಿದ ನನ್ನ ಇಬ್ಬರೂ ಚಿಕ್ಕಪ್ಪಂದಿರು ನಾನು ಹುಟ್ಟುವ ಪೂರ್ವದಲ್ಲಿ ಕೂಡಿ ಇದ್ದರೋ ಅಥವಾ ಬೇರೆ ಇದ್ದರೋ ಎಂದರೆ ಸಾಕ್ಷಿಯು ತನ್ನ ತಂದೆ ಬೇರೆಯೇ ಇದ್ದರು ಎನ್ನುತ್ತಾರೆ ಹಾಗೂ ಅವರು ಕೂಡಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. 2 ನೇ ಪ್ರತಿವಾದಿಯ ಮದುವೆ ಆಗುವವರೆಗೆ ನನ್ನ ತಂದೆ ಹಾಗೂ ಇಬ್ಬರೂ ಚಿಕ್ಕಪ್ಪಂದಿರು ಕೂಡಿಯೇ ಇದ್ದರು ಎನ್ನುವುದು ಗೊತ್ತಿಲ್ಲ. ಆ ರೀತಿ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡು ಸುಮಾರು 24-25 ವರ್ಷಗಳು ಆಗಿರುತ್ತವೆ. ನನ್ನ ತಂದೆ ಯಾವ ದಿನಾಂಕದಂದು ತೀರಿಕೊಂಡಿದ್ದಾರೆ ಎಂದು ನಿಖರವಾದ ದಿನಾಂಕ ನೆನಪಿಲ್ಲ ಎನ್ನುತ್ತಾರೆ. ನನ್ನ ತಂದೆ ಯಾವ ದಿನಾಂಕದಂದು ತೀರಿಕೊಂಡಿದ್ದಾರೆ ಎಂದು ನನ್ನ ವಕೀಲರಿಗೆ ಹೇಳಿಲ್ಲ. ವಾದ ಪತ್ರಕ್ಕೆ ಮಾಹಿತಿಯನ್ನು ನನ್ನ ವಕೀಲರಿಗೆ ನಾನು ನೀಡಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ಮಂಜೂರು ಆಗಬೇಕೆಂದು ನನ್ನ ತಂದೆ ಸರ್ಕಾರಕ್ಕೆ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಆ ರೀತಿ ವಾದ ಪತ್ರದಲ್ಲಿ ತಾನು ಬರೆಯಲು ಹೇಳಿಲ್ಲ ಎನ್ನುತ್ತಾರೆ. ದಾವಾ 3 ಎ ಆಸ್ತಿಯ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ನಾನು ಸರ್ವೇ ನಂಬರ 151 ರ 6 ಎಕರೆ 8 ಗುಂಟೆ ಜಮೀನಿನಲ್ಲಿ ಪಾಲು ಬೇಕೆಂದು ದಾವೆ ಸಲ್ಲಿಸಿದ್ದೇನೆ. ಸದರಿ ಜಮೀನಿನ ಪಹಣಿ ಪತ್ರಿಕೆ ನನ್ನ ತಾಯಿಯ ಹೆಸರಲ್ಲಿ ಇದೆ. ಆ ರೀತಿ ನನ್ನ ತಾಯಿಯ ಹೆಸರಲ್ಲಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ 151 ರ ಪಹಣಿ ಪತ್ರಿಕೆ

ಗೂಳಪ್ಪ ಭರಮಗೌಡರ ರವರ ಹೆಸರಲ್ಲಿ ಇದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಆ ಕಾರಣದಿಂದ ಸರ್ವೇ ನಂಬರ 151 ರಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ 3 ಎ ಆಸ್ತಿಯು ಎಮ್ ಇ ನಂಬರ 1348 ರ ಪ್ರಕಾರ ನನ್ನ ತಾಯಿಯ ಹೆಸರಲ್ಲಿ ಇದೆ  ಎಂದರೆ ಸರಿ. ದಾವಾ 3 ಎ ಆಸ್ತಿಯು ಸರ್ಕಾರದಿಂದ  ನನ್ನ ತಾಯಿಗೆ ಬಂದಿರುತ್ತದೆ ಎಂದರೆ ಸರಿ.

ದಿನಾಂಕ 23-09-2014 ರಂದು ನಾನು ನನ್ನ ತವರು ಮನೆ ಆಸ್ತಿಯಲ್ಲಿ ಹಕ್ಕು ಬೇಡ ಎಂದು ಹಳಿಯಾಳ ಉಪ-ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಾಯಿತ ಕೃಷಿ ಜಮೀನಿನ ಹಕ್ಕು ಬಿಟ್ಟು ಕೊಟ್ಟ ಪತ್ರ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಹೆಸರು ಸಹದೇವ ತಂದೆ ರಂಗಪ್ಪ ರಂಗೋಜಿ ಎಂದರೆ ಸರಿ. ಸದರಿ ಹಕ್ಕು ಬಿಟ್ಟು ಕೊಟ್ಟ ಪತ್ರಕ್ಕೆ ನನ್ನ ಗಂಡನು ಸಾಕ್ಷಿದಾರನಾಗಿ ಸಹಿ ಮಾಡಿದ್ದಾನೆ ಎಂದರೆ  ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸಂಭಾಜಿ ನಾಗಪ್ಪ  ಮೊಕಾಶಿ, ಸಾಃ ಶಿವಪುರ ಎನ್ನುವವರು ನನಗೆ ಪರಿಚಯ ಇಲ್ಲ. ನಾನು ನನ್ನ ತಂಗಿಯಾದ 2 ನೇ ವಾದಿ ಹಾಗೂ ಪ್ರತಿವಾದಿ ನಂಬರ 1 ರಿಂದ 5  ನೇ ಪ್ರತಿವಾದಿಗಳಿಗೆ ತವರು ಮನೆಯ ಆಸ್ತಿಗಳಲ್ಲಿ ಪಾಲು ಬೇಡ ಎಂದು ಹಕ್ಕು ಬಿಟ್ಟುಕೊಟ್ಟ ಪತ್ರ   ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ.  ನಮ್ಮ ಹಿರಿಯರಿಂದ  ಬಂದಂತಹ ಆಸ್ತಿಗಳಿಗೆ  ಸಂಬಂಧಿಸಿ ಮಾತ್ರ ನಾನು ಮೇಲೆ ಹೇಳಿದವರಿಗೆ ಹಕ್ಕು ಬಿಟ್ಟುಕೊಟ್ಟ ಪತ್ರ ಮಾಡಿದ್ದೇನೆ ಎಂದರೆ ಸರಿಯಲ್ಲ. ಹಿರಿಯರಿಂದ ಬಂದಂತಹ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳ ಕುರಿತು ನಾನು ಹಕ್ಕು ಬಿಟ್ಟುಕೊಟ್ಟ  ಪತ್ರ ಮಾಡಿರುವುದಿಲ್ಲ ಎಂದರೆ ಸಾಕ್ಷಿ ತಾನು ಯಾವುದೇ ಪತ್ರ ಬರೆದುಕೊಟ್ಟಿಲ್ಲ ಎನ್ನುತ್ತಾರೆ.

ನನ್ನ  ಗಂಡನ  ಮನೆಯಲ್ಲಿ ಸರ್ಕಾರದಿಂದ ಆಸ್ತಿ ಪಡೆಯಬೇಕು ಎಂಬ ಉದ್ದೇಶದಿಂದ ನನ್ನ ತವರು ಮನೆಯ ಆಸ್ತಿಗಳಲ್ಲಿ ನನ್ನ ಹಕ್ಕನ್ನು ಬಿಟ್ಟುಕೊಟ್ಟು ಮೇಲೆ ಹೇಳಿದ ಹಕ್ಕು ಬಿಟ್ಟುಕೊಟ್ಟ ಪತ್ರ ಬೆರದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ನಿಮ್ಮ ತವರು ಮನೆಯ ಪಿತ್ರಾರ್ಜಿತ ಆಸ್ತಿಗಳು  ಎಂದು ತೋರಿಸಲು ಯಾವ ದಾಖಲೆ ಹಾಜರುಪಡಿಸಿದ್ದೀರಿ ಎಂದರೆ  ಸಾಕ್ಷಿಯು ಯಾವುದೇ ಸರಿಯಾದ ಉತ್ತರ ನೀಡಲಿಲ್ಲ.  ವಾದ ಪತ್ರದಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ದಾವಾ 3 ಎ ಆಸ್ತಿಯು  ನನ್ನ ತಾಯಿಯ ಸ್ವಂತ ಆಸ್ತಿ ಆಗಿರುವುದರಿಂದ ಸದರಿ ಆಸ್ತಿಯನ್ನು ಅವಳು ತನ್ನ ಇಚ್ಛಾನುಸಾರ ಬೇರೆಯವರಿಗೆ ಕೊಡುವ ಹಕ್ಕನ್ನು

ಹೊಂದಿರುತ್ತಾಳೆ ಎಂದರೆ ಸರಿಯಲ್ಲ. ನನ್ನ ತಾಯಿಯ 4 ನೇ ಪ್ರತಿವಾದಿಯ ಜೊತೆ ಇರುತ್ತಾರೆ ಎಂದರೆ ಸರಿ. 4 ನೇ ಪ್ರತಿವಾದಿಯೇ ನನ್ನ ತಾಯಿಯನ್ನು ನೋಡಿಕೊಳ್ಳುತ್ತಾರೆ ಎಂದರೆ ಸರಿ. 6 ರಿಂದ 9 ನೇ ಪ್ರತಿವಾದಿಗಳು ನಿಮ್ಮ ತಾಯಿಯನ್ನು ಅವಶ್ಯಕತೆ ಬಿದ್ದಾಗ ನೋಡಿಕೊಳ್ಳುತ್ತಾ ಬಂದಿರುತ್ತಾರೆ ಎಂದರೆ ಸಾಕ್ಷಿಯು ತಾನೂ ಸಹ ನೋಡುತ್ತೇನೆ ಎನ್ನುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿಯು 4 ನೇ ಪ್ರತಿವಾದಿಯ ಜೊತೆ ಶಿವಪುರದಲ್ಲಿಯೇ ವಾಸಿಸಲು ಪ್ರಾರಂಭಿಸಿದರು ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ನಾನು ಮತ್ತು ನನ್ನ ಗಂಡನು ದಾವಾ ಆಸ್ತಿಯ ಕುರಿತು ನನ್ನ ತಾಯಿಯ ಜೊತೆ ಜಗಳ ಪ್ರಾರಂಭಿಸಿದೆವು ಎಂದರೆ ಸರಿಯಲ್ಲ. ಆ ಕಾರಣದಿಂದ ನನ್ನ ಅಕ್ಕ ತಂಗಿಯರು ನನ್ನ ಜೊತೆ ಚೆನ್ನಾಗಿಲ್ಲ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಿದ ನಂತರ ನನ್ನ ಅಕ್ಕ ತಂಗಿಯರು ರಾಜಿ ಮಾಡಿಕೊಳ್ಳೋಣಾ ಎಂದು ಹೇಳಿದರೂ ಸಹ ನಾನು ಒಪ್ಪಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ 3 ಎ ಆಸ್ತಿಯು ಸರ್ಕಾರದಿಂದ ನನ್ನ ತಾಯಿಯ ಹೆಸರಿಗೆ ಆಗುವುದಕ್ಕೆ ನನ್ನ ಚಿಕ್ಕಪ್ಪಂದಿರ ಮಕ್ಕಳು ಒಪ್ಪಿಗೆ ಕೊಟ್ಟಿರುವುದರಿಂದಲೇ ಸದರಿ ಆಸ್ತಿ ನನ್ನ ತಾಯಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ನಿಮ್ಮ ತಂದೆ ಜೀವಂತ ಇದ್ದಾಗ ನಿಮ್ಮ ತಂದೆ ಹಾಗೂ ನಿಮ್ಮ ಚಿಕ್ಕಪ್ಪಂದಿರ ಕುಟುಂಬಕ್ಕೆ ನಿಮ್ಮ ತಂದೆಯೇ ಯಜಮಾನ ಇದ್ದನು ಹಾಗೂ ಆತನ ನಿಧನದ ನಂತರ ನಿಮ್ಮ ತಾಯಿ ಸದರಿ ಕುಟುಂಬಕ್ಕೆ ಯಜಮಾನಿ ಆದರು ಎಂದರೆ ಸಾಕ್ಷಿಯು ತನ್ನ ತಾಯಿಯೇ ಯಜಮಾನಿ ಇದ್ದರು ಎನ್ನುತ್ತಾರೆ. ನನ್ನ ತಾಯಿಗೆ ದಾವಾ 3 ಎ ಆಸ್ತಿ ಬರಲು ನಾವು ಯಾವುದೇ ಕಬುಲಾಯತ್ ಬರೆದುಕೊಟ್ಟಿರುವುದಿಲ್ಲ.

ನಿಮ್ಮ ತಾಯಿಗೆ ಬಂದಂತಹ ಆಸ್ತಿಯನ್ನು ನಿಮ್ಮ ತಾಯಿಯು 6 ರಿಂದ 9 ನೇ ಪ್ರತಿವಾದಿಗಳಿಗೆ ಬರೆದುಕೊಟ್ಟಿದ್ದಾಳೆ ಎಂದರೆ ಸಾಕ್ಷಿಯು ತನ್ನ ತಾಯಿಗೆ ಏನೂ ಗೊತ್ತಾಗುವುದಿಲ್ಲ ಎನ್ನುತ್ತಾರೆ. ನನಗೆ ಆಸ್ತಿಯನ್ನು ಪಡೆದುಕೊಳ್ಳಬೇಕೆನ್ನುವ ಕಾರಣದಿಂದ ನನ್ನ ತಾಯಿಗೆ ಏನೂ ಗೊತ್ತಾಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಏನೂ ತಿಳಿಯದೇ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯು 6 ರಿಂದ 9 ನೇ ಪ್ರತಿವಾದಿಗಳಿಗೆ ನೀಡಿದ ಆಸ್ತಿಯಲ್ಲಿ ಪಾಲು ಕೇಳಲು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯು ಕಾನೂನು ಪ್ರಕಾರವೇ 6 ರಿಂದ 9 ನೇ ಪ್ರತಿವಾದಿಳಿಗೆ ದಾವಾ 3 ಎ ಆಸ್ತಿಯನ್ನು

ಬರೆದುಕೊಟ್ಟಿದ್ದಾಳೆ ಎಂದರೆ ಸರಿಯಲ್ಲ. ಆ ರೀತಿ ಕಾನೂನು ಪ್ರಕಾರ ವ್ಯವಹಾರ ಆಗಿದ್ದರಿಂದಲೇ ತಹಶೀಲ್ದಾರ ರವರು 6 ರಿಂದ 9 ನೇ ಪ್ರತಿವಾದಿಗಳ ಹೆಸರುಗಳನ್ನು ಪಹಣಿ ಪತ್ರಿಕೆಗಳಲ್ಲಿ ದಾಖಲಿಸಿದ್ದಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ದಾವಾ 3 ಎ ಆಸ್ತಿಗೆ ಸಂಬಂಧಿಸಿ ನಾನು ತಹಶೀಲ್ದಾರ ನ್ಯಾಯಾಲಯದಲ್ಲಿ ಯಾವುದೇ ಪ್ರಕರಣ ದಾಖಲಿಸಿಲ್ಲ. ತಹಶೀಲ್ದಾರ ನ್ಯಾಯಾಲಯದಲ್ಲಿ ಆರ್ ಟಿ ಎಸ್ ನಂಬರ 27/2018 ಅನ್ನು ನಾನು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಆ ಪ್ರಕರಣದ ಇತ್ಯರ್ಥ ಆಗುವ ಪೂರ್ವದಲ್ಲಿಯೇ ಈ ದಾವೆ ಸಲ್ಲಿಸಿದ್ದೇನೆ ಎನ್ನುವುದು ಗೊತ್ತಿಲ್ಲ. ಆ ಪ್ರಕರಣದಲ್ಲಿ ನನ್ನ ವಿರುದ್ಧ ಆದೇಶ ಆಗುತ್ತದೆ ಎನ್ನುವ ಕಾರಣದಿಂದ ಸದರಿ ಪ್ರಕರಣ ಇತ್ಯರ್ಥಗೊಳ್ಳುವ ಮುಂಚೆ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 07-01-2019 ರಂದು ನಾನು ತಹಶೀಲ್ದಾರ ಕಚೇರಿಗೆ ಹೋಗಿರುವುದಿಲ್ಲ.

ನನ್ನ ತವರು ಮನೆ ಆಸ್ತಿಯಲ್ಲಿ ನನಗೆ ಯಾವುದೇ ಪಾಲು ಇಲ್ಲ ಎಂದು ಗೊತ್ತಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಆಸ್ತಿ ಬರುವುದಿಲ್ಲ ಎಂದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

**ಪಾಟೀ ಸವಾಲು :** 6, 8 ರಿಂದ 9 ನೇ ಪ್ರತಿವಾದಿಗಳು ಹಾಗೂ ಅವರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ).

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.